## ಶೋಭಿತ ಶುಭೋದಯ

ಕನ್ನಡದ ಚಂದನ ವಾಹಿನಿಯಲ್ಲಿ ದಿನ ಬೆಳಿಗ್ಗೆ ಪ್ರಸಾರವಾಗುವ 'ಶುಭೋದಯ ಕರ್ನಾಟಕ' ಅತ್ಯಂತ ಸುಂದರ ಮತ್ತು ಉಪಯುಕ್ತ ಕಾರ್ಯಕ್ರಮ. ನಾಡಿನ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಕೊಡುಗೆಯನ್ನು ನೀಡಿ ಎಲೆ ಮರೆಯ ಕಾಯಿಯಂತಿರುವ ಸಾಧಕರನ್ನು ಕರೆತಂದು ನೇರವಾಗಿ ಅವರೊಡನೆ ಮಾತುಕತೆ ಮಾಡುತ್ತಾರೆ. ಆ ಮೂಲಕ ಅವರ ಸಾಧನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸುತ್ತಿರುವ ಚಂದದ 'ಚಂದನ' ವಾಹಿನಿಗೆ ನಮ್ಮ ನಮನ.

ದಿನ ಬೆಳಗಾದರೆ ಸಾಕು ಮೈ ತುಂಬಾ ಬಂಗಾರ ಧಾರಣೆ ಮಾಡಿಕೊಂಡು, ತರಾವರಿ ವೇಷ ಧರಿಸಿ ಬುರುಡೆ ಭವಿಷ್ಯ ಹೇಳುವ ಜ್ಯೋತಿಷ್ಯ ಕಾರ್ಯಕ್ರಮಗಳನ್ನೇ ಪ್ರಸಾರ ಮಾಡುತ್ತಿರುವ ಇತರೆ ಖಾಸಗಿ ಟೀವಿಯವರೂ ಚಂದನದ ಶುಭೋದಯ ನೋಡಿ ಕಲಿಯಬೇಕು. ಸಮಾಜಮುಖಿ ಕಾರ್ಯಕ್ರಮಗಳನ್ನು ನೀಡುವ ಮೂಲಕ ಜ್ಞಾನದೀವಿಗೆಯನ್ನು ಹಚ್ಚುವ ಕೆಲಸವನ್ನು ಖಾಸಗಿ ವಾಹಿನಿಗಳು ಕೈಗೆತ್ತಿಕೊಳ್ಳಲಿ.

—ಕೆ.ಸಿ. ರತ್ನಶ್ರೀ ಶ್ರೀಧರ್, ಹರಿಯಾಣ

## ಕೋರಿಕೆಯ ಗೀತೆಗಳು

ಕನ್ನಡದ ಕಲರ್ಸ್ ಸೂಪರ್‌ನ 'ಕನ್ನಡ ಕೋಗಿಲೆ'ಯಲ್ಲಿ ಅನೇಕ ಪ್ರತಿಭಾವಂತರಿದ್ದಾರೆ. ಅದರಲ್ಲೂ ಉಡುಪಿಯ ಕಲಾವತಿ ದಯಾನಂದ್ ಅಪರೂಪದ ಗಾಯಕಿ ಅವರು ಹಿಂದಿ ಗಾಯಕಿ ಉಷಾ ಉತ್ತುಪ್ ರೀತಿಯಲ್ಲಿಯೇ ಕನ್ನಡದಲ್ಲೂ ಹಾಡುತ್ತಾರೆಂದರೆ ಅದು 'ಅದ್ಭುತ' ಎನ್ನಲೇಬೇಕು. ಅವರ ಕಂಠದಲ್ಲಿ ಎರಡು ಹಾಡುಗಳನ್ನು ಕೇಳಬೇಕು ಎಂಬ ಆಸೆ. ದಯಮಾಡಿ ನಮಗೋಸ್ಕರ 'ತಾಯಿ ಸತ್ತ ಮೇಲೆ ತವರಿಗೆ ಎಂದು ಹೋಗಬಾರದಮ್ಮ' ಎಂಬ ಜನಪದ ಗೀತೆ ಹಾಗೂ 'ಕಾಣದ ಕಡಲಿಗೆ ಹಂಬಲಿಸಿದೆ ಮನ' ಎಂಬ ಭಾವಗೀತೆಯನ್ನು ಕಲಾವತಿ ಅವರಿಂದ ಹಾಡಿಸಬೇಕೆಂದು ಮನವಿ.

— ಎನ್.ಎಸ್. ಚಂದ್ರಶೇಖರ್ ಬೆಂಗಳೂರು

ವಾರದ ಪತ್ರ

## ಕನ್ನಡ ಕಾರ್ಯಕ್ರಮ ಇಂಗ್ಲಿಷ್‌ಮಯ

ಚಂದನದ 'ಶುಭೋದಯ ಕರ್ನಾಟಕ'ದಲ್ಲಿ ಹೃದಯ ರೋಗ ತಜ್ಞ ಡಾ. ಜವಳಿ ಅವರ ಸಂದರ್ಶನ ಪ್ರಸಾರವಾಯ್ತು. ಸಂದರ್ಶನದಲ್ಲಿ ಕಾರ್ಯಕ್ರಮ ನಿರ್ವಾಹಕರು ಕೇಳಿದ ಒಂದೇ ಒಂದು ಪ್ರಶ್ನೆಗೂ ಡಾ. ಜವಳಿ ಕನ್ನಡದಲ್ಲಿ ಉತ್ತರಿಸಲಿಲ್ಲ!

ಇಡೀ ಕಾರ್ಯಕ್ರಮದಲ್ಲಿ ಅವರು ಬರೀ ಇಂಗ್ಲಿಷ್‌ನಲ್ಲೇ ಉತ್ತರಿಸಿದರು. ಇದು ಯಾರಿಗೆ ಅರ್ಥವಾಗಬೇಕು? ಕಾರ್ಯಕ್ರಮ ಪ್ರಸಾರವಾಗುತ್ತಿರುವುದು ಕರ್ನಾಟಕದಲ್ಲಿ ಎಂಬ ಕನಿಷ್ಠ ತಿಳುವಳಿಕೆಯೂ ಹೊಳೆಯದಿರುವುದು ಆಶ್ಚರ್ಯಕರ. ಅಷ್ಟೇ ಅಲ್ಲ ಡಾ. ಜವಳಿಯವರು ಕನ್ನಡನಾಡಿನ ಕಲಬುರ್ಗಿಯವರೆಂದು ಕಾರ್ಯಕ್ರಮ ನಿರೂಪಕರೇ ಪರಿಚಯಿಸಿದರೂ, ಯಾರಿಗೂ ಅರ್ಥವಾಗದೆ ವ್ಯರ್ಥವಾಯಿತು. ಸರ್ಕಾರಿ ವಾಹಿನಿಯ ಹಣ ಪೋಲಾಯ್ತು. ಇದಕ್ಕೆಲ್ಲ ಯಾರು ಹೊಣೆ?

—ಹುರುಕಡ್ಲಿ ಶಿವಕುಮಾರ್, ಹಗರಿಬೊಮ್ಮನಹಳ್ಳಿ

## ಕುಂಟುತ್ತಾ ಸಾಗುವ ಕಮಲಿ!

ಝೀ ಕನ್ನಡದ 'ಕಮಲಿ' ಕುಂಟುತ್ತಾ ಸಾಗುವ ಮೂಢನಂಬಿಕೆಯನ್ನು ಹೇರುವ ಅವಾಸ್ತವಿಕ ಧಾರಾವಾಹಿ. ಸ್ವಾಮಿಯೊಬ್ಬರು ಕಣ್ಮುಚ್ಚಿದಾಗ ಎಲ್ಲವೂ ಕಾಣುವ, ಭವಿಷ್ಯದ ಬಗ್ಗೆ ನಿಖರವಾಗಿ ಹೇಳುವ ಪಾತ್ರ ನಮ್ಮನ್ನು ಶತಮಾನಗಳ ಹಿಂದೆ ಕಳಿಸುತ್ತದೆ. ಧಾರಾವಾಹಿಯಲ್ಲಿ ಬರುವ ಕಥೆ ಮತ್ತು ಘಟನೆಗಳು ವಾಸ್ತವದಿಂದ ಬಹಳ ದೂರ. ಕಾಲೇಜಿನಲ್ಲಿಯೆ ವಿದ್ಯಾರ್ಥಿನಿ ಪಾಠ ಮಾಡುವ ಉಪನ್ಯಾಸಕರಿಗೆ ಏಕವಚನದಲ್ಲಿ ಮಾತಾಡುವುದು ಹೇಸಿಗೆ ಅನಿಸುತ್ತದೆ. ಕಾಮಿನಿಯ ಪಾತ್ರಧಾರಿಯ ಅತಿರೇಕದ ನಟನೆ ಕಂಪನಿ ನಾಟಕವನ್ನು ನೆನಪಿಸುತ್ತದೆ. ಆದರೂ ಎಲ್ಲಾ ಪಾತ್ರಧಾರಿಗಳ ನಟನೆಯನ್ನು ಒಪ್ಪಲೇ ಬೇಕು.

—ಬೀರಣ್ಣ ನಾಯಕ ಮೊಗಟಾ ಯಲ್ಲಾಪುರ

## ಏಕಪಕ್ಷೀಯ ಕಸ್ತೂರಿ

ಲೋಕಸಭಾ ಚುನಾವಣೆ ಫಲಿತಾಂಶದ ದಿನ ದೇಶದ ಎಲ್ಲ ವಾಹಿನಿಗಳಲ್ಲೂ ಅದೇ ಪ್ರಮುಖ ಸುದ್ದಿಯಾಗಿ ಬಿತ್ತರಗೊಳ್ಳುತ್ತಿತ್ತು. ಬಿಜೆಪಿ ನೇತೃತ್ವದ ಎನ್‌ಡಿಎ ವಿಜಯದ ಬಗ್ಗೆ ಮೇಲಿಂದ ಮೇಲೆ ಅಂಕಿ ಅಂಶಗಳ ಸಮೇತ ಪ್ರಸಾರ ಮಾಡುತ್ತಿದ್ದವು.

ಆದರೆ ಕಸ್ತೂರಿ ವಾಹಿನಿ ಮಾತ್ರ ಇದಾವುದರ ಬಗ್ಗೆ ತಲೆಕೆಡಿಸಿಕೊಳ್ಳದೆ ಕೇವಲ ಚಿಂಚೋಳಿ ವಿಧಾನಸಭಾ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಜೆಡಿಎಸ್ ಮೈತ್ರಿ ಅಭ್ಯರ್ಥಿ ಕುಸುಮಾ ಶಿವಳ್ಳಿ ಅವರ ಗೆಲುವಿನ ಬಗ್ಗೆ ಮಾತ್ರ ಭಾವಚಿತ್ರದ ಸಮೇತ ಮೇಲಿಂದ ಮೇಲೆ ಸುದ್ದಿಯನ್ನು ತೋರಿಸುತ್ತಿದ್ದರು.

ಮಂಡ್ಯದಲ್ಲಿ ಸುಮಲತಾ ಅವರ ಭರ್ಜರಿ ಗೆಲುವು ಇವರಿಗೆ ಸುದ್ದಿಯಾಗಿರಲಿಲ್ಲ. ಚಂದನದಂತಹ ದೂರದರ್ಶನ ವಾಹಿನಿಗಳು ತಮ್ಮ ದೈನಂದಿನ ಇತರ ವಿವಿಧ ಕಾರ್ಯಕ್ರಮಗಳನ್ನು ಬದಿಗೊತ್ತಿ ಸಂಪೂರ್ಣ ದಿನವನ್ನು ಚುನಾವಣೆ ಫಲಿತಾಂಶಕ್ಕೆ ಮೀಸಲಿಟ್ಟಿದ್ದವು. ಸಂಜೆ ಹೊತ್ತಿಗೆ ಕಸ್ತೂರಿಯಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ 'ಜಲಯಜ್ಞ' ಎಂಬ ಚಾಮರಾಜನಗರ ಅಭಿವೃದ್ಧಿ ಕಾರ್ಯಕ್ರಮಕ್ಕೆ ಒತ್ತು ಕೊಟ್ಟರು.

ನಂತರ ರಾಜ್‌ಕುಮಾರ್ ಪ್ರಶಂಸೆಯ ಚಲನಚಿತ್ರ ಕಾರ್ಯಕ್ರಮ, ಅದಾದ ಮೇಲೆ ಕುಮಾರಸ್ವಾಮಿ ಸರ್ಕಾರ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ 'ವರುಷದ ಹರುಷ' ಶುರು ಮಾಡಿದರು. ಇಂತಹ ವಾಹಿನಿಗಳು ಎಷ್ಟರಮಟ್ಟಿಗೆ ವಿಶ್ವಾಸಾರ್ಹತೆ ಗಳಿಸಬಲ್ಲರು?

—ಶ್ರೀಧರ್, ಬೆಂಗಳೂರು

## ಮಾಧ್ಯಮಗಳ ಹೊಣೆ

ಇತ್ತೀಚೆಗೆ ದಡಾರ ರೋಗದ ಲಸಿಕೆ ಹಾಕುವ ಕಾರ್ಯಕ್ರಮವಿತ್ತು. ಆ ಲಸಿಕೆ ಹಾಕಿಸಿಕೊಂಡ ಮಗುವಿಗೆ ವೈದ್ಯಕೀಯ ಸಮಸ್ಯೆಗಳು ಹರಡುತ್ತವೆ ಎಂದು ಫೇಸ್‌ಬುಕ್, ವಾಟ್ಸ್‌ಆ್ಯಪ್ ಮತ್ತು ಟ್ವಿಟರ್‌ಗಳಲ್ಲಿ ಸುಳ್ಳು ಸುದ್ದಿಗಳನ್ನು ಹರಡಿ ಜನರಿಗೆ ಭೀತಿ ಹುಟ್ಟಿಸಿದವು.

ಇನ್ನು ಮಕ್ಕಳ ಕಳ್ಳರಿದ್ದಾರೆಂದು ಹರಡಿದ್ದ ಸುದ್ದಿ. ಇದರಿಂದ ರೊಚ್ಚಿಗೆದ್ದ ಜನ ಅಮಾಯಕರನ್ನು ಬಲಿ ತೆಗೆದುಕೊಂಡರೆಂದು ವರದಿ. ಇಂತಹ ಸುದ್ದಿಗಳು ಸುದ್ದಿಯಾಗಷ್ಟೆ ಉಳಿದುಕೊಳ್ಳುವುದಿಲ್ಲ. ವ್ಯಕ್ತಿಯ ಆಲೋಚನಾ ಕ್ರಮವನ್ನು ನಿರ್ದಿಷ್ಟ ದಿಕ್ಕಿನಲ್ಲಿ ಸದ್ದಿಲ್ಲದೆ ಒಯ್ಯುತ್ತವೆ. 'ಭಾರತದಲ್ಲಿ ಸುಳ್ಳು ಸುದ್ದಿ ವೈರಾಣುವಿನಂತೆ ಹರಡುತ್ತದೆ' ಎಂದು ವಿಶ್ವಸಂಸ್ಥೆ ವಿಷಾದ ಸೂಚಿಸಿದೆ. ನಮಗೆ ವಾಕ್ ಸ್ವಾತಂತ್ರ್ಯವಿದೆ, ಆದರೆ ಅದನ್ನು ದುರುಪಯೋಗಪಡಿಸುವುದರಲ್ಲಿ ಮೊದಲ ಸ್ಥಾನ ನ್ಯೂಸ್ ಚಾನೆಲ್‌ಗೆ ದೊರೆತಿದೆ. ಚಾನೆನ್‌ನವರು ಪೈಪೋಟಿಯಿಂದ ನಾವು ಮೊದಲು ತೋರಿಸುತ್ತೇವೆಂದು ಎಲ್ಲಾ ಚಾನೆಲ್‌ನಲ್ಲೂ ಅದೇ ಸುದ್ದಿ ಪ್ರಸಾರವಾಗುತ್ತಿರುತ್ತದೆ. ವಾಟ್ಸ್‌ಆ್ಯಪ್, ಫೇಸ್‌ಬುಕ್‌ಗಳು ಕ್ಷಣದಲ್ಲಿ ಸುಳ್ಳು ಸುದ್ದಿಗಳನ್ನು ಸಾವಿರಾರು ಜನರಿಗೆ ಹರಡುತ್ತವೆ. ಅವೆಲ್ಲ ವೈಯಕ್ತಿಕ ಎಂದು ಸುಮ್ಮನಾಗಬಹುದು. ಆದರೆ ಟೀವಿಯಂತಹ ಸಮೂಹ ಮಾಧ್ಯಮಗಳು ಸಾಮಾನ್ಯರಿಗೆ ಸರಿಯಾದ ಸುದ್ದಿಗಳನ್ನು ಕೊಡಬೇಕೆನ್ನುವುದು ಅವರ ಹೊಣೆಗಾರಿಕೆ ಆಗಬೇಕು.

—ವೀಣಾಶಂಕರ್, ಬೆಂಗಳೂರು

## ಗಟ್ಟಿಮೇಳ ಚೆನ್ನಾಗಿದೆ

ಝೀ ಚಾನಲ್‌ನ 'ಗಟ್ಟಿಮೇಳ' ಧಾರಾವಾಹಿಯ ಕಥೆ ವಿಭಿನ್ನವಾಗಿದ್ದು ಚೆನ್ನಾಗಿ ಮೂಡಿ ಬರುತ್ತಿದೆ. ಬಹಳ ದಿನಗಳ ನಂತರ ಬಂದಿರುವ ಸುಧಾ ನರಸಿಂಹರಾಜು ಅವರ ಜೊತೆಗೆ ಉಳಿದ ಪಾತ್ರಧಾರಿಗಳು ಲವಲವಿಕೆಯಿಂದ ಅಭಿನಯಿಸಿದ್ದಾರೆ.

—ಎಸ್. ವಿಜಯಕುಮಾರಿ, ಬೆಂಗಳೂರು